ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದಃ

ನನ್ನ ತಂದೆಯವರ ಭಾಗಕ್ಕೆ ಬಂದ ಆಸ್ತಿಗಳಾದ ಸರ್ವೆ ನಂಬರ್ 206 ವಿಸ್ತೀರ್ಣ 16 ಗುಂಟೆ, ಸರ್ವೆ ನಂಬರ್ 205 ವಿಸ್ತೀರ್ಣ 16 ಗುಂಟೆ ಜಮೀನುಗಳು ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯ್ತಿಗೆ ಸೇರಿದವುಗಳಾಗಿರುತ್ತವೆ. ಸದರಿ ಎರಡು ಜಮೀನುಗಳನ್ನು ನಾವು ಮಾರಾಟ ಮಾಡಿರುವುದಿಲ್ಲ ನಾವು ಈಗಲೂ ಉಳಿಸಿಕೊಂಡಿರುತ್ತೇವೆ. ನಮ್ಮ ತಂದೆಯವರಿಗೆ ಬಂದ ಆಸ್ತಿಗಳಲ್ಲಿ ಕೆಲವೊಂದು ಜಮೀನುಗಳನ್ನು ಮಾರಾಟ ಮಾಡಿದ್ದೇವೆ. ನಾವು ಮಾರಾಟ ಮಾಡಿರುವ ಜಮೀನುಗಳ ಚಕ್ಕುಬಂದಿ ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಇರುವ ಜಮೀನನ್ನು ನಾವು ಮಾರಾಟ ಮಾಡಿರುವುದಿಲ್ಲ. ನಾವು ಮಾರಾಟ ಮಾಡಿರುವ ಜಮೀನುಗಳನ್ನು ಯಾವ ವರ್ಷದಲ್ಲಿ ಮಾರಾಟ ಮಾಡಿದ್ದೇವೆ ಎಂದು ನನಗೆ ಈಗ ನೆನಪಿಲ್ಲ.

ನಿಪಿ-3 ದಾಖಲೆಯಲ್ಲಿ ಏನು ಬರೆದಿರುತ್ತದೆ ಎಂದು ನಾನು ಓದಿರುತ್ತೇನೆ ಆದರೆ ಈಗ ಅದನ್ನು ಮರೆತಿದ್ದೇನೆ. ಸದರಿ ದಾಖಲೆಯಂತೆ ನನ್ನ ತಂದೆ ಮತ್ತು ಆತನ ಸಹೋದರರು ಗುರುವಯ್ಯನವರು ಪೌತಿಯಾದ ಕಾರಣ ಅವರ ಹಿರಿಯಮಗನಾದ ಗುರುಮೂರ್ತಿಯವರ ಹೆಸರಿಗೆ ಖಾತೆ ಮಾಡಲು ಹೇಳಿಕೆಯನ್ನು ನೀಡಿರುತ್ತಾರೆಂದರೆ ಸಾಕ್ಷಿಯು ನನ್ನ ತಂದೆ ಆ ರೀತಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ದಾಖಲೆಯನ್ನು 1995-96 ರಿಂದ ಇಲ್ಲಿಯವರೆಗೂ ಕಂದಾಯ ನ್ಯಾಯಾಲಯದಲ್ಲಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ.

ನಿಪಿ-4 ರಲ್ಲಿ ಹೇಳಿರುವ ಅಂಶಗಳು ಸರಿಯಾಗಿವೆ ಎಂದರೆ ಸರಿ. ನಿಪಿ-4 ದಾಖಲೆಯನ್ನು ಸಹ ನಾನಾಗಲೀ ನನ್ನ ತಂದೆಯವರಾಗಲೀ ಕಂದಾಯ ನ್ಯಾಯಾಲಯದಲ್ಲಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ನಿಪಿ-4 ದಾಖಲೆಯಂತೆ ದಾವಾ ಸ್ವತ್ತು ನನ್ನ ದೊಡ್ಡಪ್ಪನ ಮಗ ದೇವರಾಜು ರವರ ಹೆಸರಿನಲ್ಲಿ ಖಾತೆ ದಾಖಲಾಗಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾವು ಸರ್ವೆ ನಂಃ204/2 ರಲ್ಲಿ 4 ಎಕರೆ 4 ಗುಂಟೆ ಜಮೀನಿಗೆ ದಾವೆಯನ್ನು ಮಾಡಿರುವುದಾಗಿ ನುಡಿಯುತ್ತಾರೆ. ನಿಪಿ-3 ಮ್ಯುಟೇಶನ್ ನಲ್ಲಿ ದಾವಾ ಸ್ವತ್ತನ್ನು ಹೊರತು ಪಡಿಸಿ ಭಾಗ ಮಾಡಿಕೊಂಡಿರುತ್ತೇವೆ ಎಂದು ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿ. ಸಿದ್ದಯ್ಯನವರಿಗೆ ಸೇರಿದ ದಾವಾ ಸ್ವತ್ತನ್ನು ಹೊರತುಪಡಿಸಿ ಎಲ್ಲಾ ಪಿತ್ರಾರ್ಜಿತ ಸ್ವತ್ತುಗಳನ್ನು ನಾವು ಭಾಗಮಾಡಿಕೊಂಡಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ಸಿದ್ದಯ್ಯನವರು ಯಾವುದೇ ಮರಣ ಶಾಸನವನ್ನು ಅಥವಾ ದಾನಪತ್ರವನ್ನು ಮಾಡಿರುವುದಿಲ್ಲ. ಸಾಕ್ಷಿಗೆ ನೀವು ಈಗಲೂ ಸಹ ಒಟ್ಟು ಕುಟುಂಬದ ಸದಸ್ಯರಾಗಿದ್ದು ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು ಮುಂದುವರೆದು ಕೈ ಬರಹದ ಪಹಣಿಗಳಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಸಾಕ್ಷಿಗೆ ದಿನಾಂಕಃ13.05.2011 ರಂದು ಆದ ನೋಟರೀಕೃತ ಹಕ್ಕು ನಿವೃತ್ತಿ

ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಡಿ-1 ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. ಸದರಿ ನಿಡಿ-1 ದಾಖಲೆಯಂತೆನ್ನು ಬರೆದುಕೊಟ್ಟ ಸಮಯದಲ್ಲಿ ದಾವಾ ಸ್ವತ್ತು ಗುರುಮೂರ್ತಿಯವರ ಹೆಸರಿನಲ್ಲಿ ಇದ್ದ ಬಗ್ಗೆ ನಮಗೆ ತಿಳಿದಿರಲಿಲ್ಲ. ನಿಡಿ-1 ರಲ್ಲಿಯೂ ಸಹ ನಾವು ಒಟ್ಟು ಕುಟುಂಬದಲ್ಲಿ ಇರುವ ಬಗ್ಗೆ ನಾವು ಹೇಳಿರುವುದಿಲ್ಲ ಎಂದರೆ ಸರಿ. ಬಿಡದಿ ಹೋಬಳಿಯ ಗೋಪಹಳ್ಳಿ ಗ್ರಾಮದಲ್ಲಿ ಈಗ ಜಮೀನಿನ ಬೆಲೆ ಹೆಚ್ಚಾಗಿ ಇರುವುದರಿಂದ ನನ್ನ ತಂದೆಯವರನ್ನು ಪುಸಲಾಯಿಸಿ ಭಾಗ ಕೇಳಿ ಸುಳ್ಳು ದಾವೆಯನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲ ಎಂದು ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.